OS No. 19/2015

DW-2

**(ಇಂದು ದಿಃ 18-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲು- ವಾದಿ ಪರ ಶ್ರೀ.SKD ವಕೀಲರಿಂದಃ-**

ನನ್ನ ಕುಟುಂಬದ ಹಿರಿಯರ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ದೊಡ್ಡಪ್ಪ ಆಶಣ್ಣನಿಗೆ ಒಬ್ಬನೇ ಮಗ, ಆತನ ಹೆಸರು ಸಾಯಪ್ಪ, ಆಶಣ್ಣರವರಿಗೆ ಸಾಯಣ್ಣ, ಮುಗ್ಗಪ್ಪ, ಪೆದ್ದ ಯಲ್ಲಪ್ಪ , ಚಿನ್ನ ಯಲ್ಲಪ್ಪ ಮತ್ತು ಹುಸೇನಪ್ಪ ಮಕ್ಕಳು ಎಂದರೆ ಸರಿ. ಹುಸೇನಪ್ಪನಿಗೆ ಸಾಯಮ್ಮ ಹೆಂಡತಿ ಇದ್ದಳು ಎಂದರೆ ಸರಿ. ಸದರಿ ಸಾಯಮ್ಮನ ಮಗಳು 1ನೇ ವಾದಿ ಶಾಮಮ್ಮ ಎಂದರೆ ಸರಿ. ಈ ಹಿಂದೆ ಕಲಬುರಗಿಯ ನ್ಯಾಯಾಲಯದಲ್ಲಿ ಅಸಲು ದಾವಾ ನಂ.3/1985 ರಲ್ಲಿ ಏನು ತೀರ್ಪು ಆಗಿದೆ ನನಗೆ ಗೊತ್ತಿಲ್ಲ, ಸದರಿ ದಾವೆಯಲ್ಲಿನ ಪ್ರತಿವಾದಿಯರು ಏನು ತಖರಾರು ಸಲ್ಲಿಸಿದ್ದರು ನನಗೆ ಗೊತ್ತಿಲ್ಲ.

ಸರ್ವೇ ನಂ. 185/2 6 ಎಕರೆ 8 ಗುಂಟೆ ಜಮೀನು ವಾದಿ ಶಾಮಮ್ಮನ ತಾಯಿ ಸಾಯಮ್ಮನಿಗೆ ಸರಕಾರದಿಂದ ಮಂಜೂರಾಗಿತ್ತು ಎಂದರೆ ಸರಿ. ಅವರ ಜೋತೆಯಲ್ಲಿ ತಿಪ್ಪಣ್ಣ ತಂದೆ ಲಚಮಪ್ಪ ಮತ್ತು ಸಂದಮ್ಮ ಗಂಡ ಚೆಂದಪ್ಪ , ಬುಗಮ್ಮ ಗಂಡ ಹನುಮಯ್ಯ , ಭೀಮಪ್ಪ ತಂದೆ ಸಾಯಣ್ಣ ಪಲ್ಲಿ , ಸಾಯಮ್ಮ ಗಂಡ ಹಣಮಪ್ಪ ಬಕ್ಕಿ , ಬಂದೆಪ್ಪ ತಂದೆ ಸಂಗಣ್ಣ, ನರಸಪ್ಪ ತಂದೆ ಹುಸೇನಪ್ಪ, ಆಶಣ್ಣ ತಂದೆ ಚಂದ್ರಪ್ಪ, ಪೆದ್ದ ಮೊಗಲಪ್ಪ ತಂದೆ ಬಿಚ್ಚಪ್ಪ ರವರಿಗೆ ನಿಪಿ-43 ರ ಪ್ರಕಾರ ಮಂಜೂರಾಯಿತು ಎಂದರೆ ಸರಿ. ನರಸಪ್ಪ ತಂದೆ ಹುಸೇನಪ್ಪ ನನ್ನ ತಂದೆ. ನನ್ನ ತಂದೆಗೆ 6 ಎಕರೆ 8 ಗುಂಟೆ ಮಂಜೂರಾಗಿತ್ತು . ನಿಪಿ-43 ರಲ್ಲಿ ಮಂಜೂರಾದಂತೆ ಎಲ್ಲರು ಅವರವರ ಜಮೀನುಗಳಿಗೆ ಮಾಲೀಕರು ಎಂದರೆ ಸರಿ. ಸಾಕ್ಷಿ ಮುಂದುವರೆದು ತದಾನಂತರ ಶಾಮಮ್ಮ ಅವಳಿಗೆ ಮಂಜೂರಾಗಿದ್ದ ಸ್ವತ್ತನ್ನು ರಾಜೀ ಡಿಕ್ರಿ ಪ್ರಕಾರ ನಮ್ಮ ತಂದೆಗೆ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನನ್ನ ತಂದೆ ಸಾಯಮ್ಮ ನಿಂದ ಸರ್ವೇ ನಂ.185 ರಲ್ಲಿ 6 ಎಕರೆ 8 ಗುಂಟೆ ಜಮೀನನ್ನು ಹಣ ಕೊಟ್ಟು ಖರೀದಿ ಮಾಡಿದ್ದರು. ಆ ಬಗ್ಗೆ ನೋಂದಾಯಿತ ಖರೀದಿ ಪತ್ರ ಆಗಿಲ್ಲ. ಸಾಮಮ್ಮನ ತಾಯಿ ಸಾಯಮ್ಮ ನಿಪಿ-45 ರ ಪ್ರಕಾರ 1983-85 ರಲ್ಲಿ ನೋಂದಾಯಿತ ವಿಲ್ ಡೀಡ್ ನ್ನು ಮಗಳಿಗೆ ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-46 ರ ಪ್ರಕಾರ ನ್ಯಾಯಾಲಯ ವಿಲ್ ಡೀಡ್ ಉರ್ಜೀತ ಅಲ್ಲ ಎಂಬ ನಮ್ಮ ಪ್ರಾರ್ಥನೆಯನ್ನು ತಳ್ಳಿ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ರಾಜೀ ಡೀಕ್ರಿ ಪ್ರಕಾರ ಯಾರು ನಡೆದುಕೊಂಡಿಲ್ಲ ಎಂದರೆ ಸರಿಯಲ್ಲ, ದಾವಾ ಸ್ವತ್ತುಗಳಿಗೆ ಸಾಮಮ್ಮ ಮಾಲೀಕರು ಮತ್ತು ಕಬ್ಜಾದಾರರು ಎಂದರೆ ಸರಿಯಲ್ಲ, ನಿಪಿ-49 ರ ಪ್ರಕಾರ ಎ.ಸಿ ನ್ಯಾಯಾಲಯದಲ್ಲಿ ಪ್ರಕರಣ ನಡೆದು ತೀರ್ಮಾನ ಆಗಿದ ಎಂದರೆ ನನಗೆ ಗೊತ್ತಿಲ್ಲ, ಜಿಲ್ಲಾ

ಅಧಿಕಾರಿಗಳ ಕಚೇರಿಯಲ್ಲಿ ನಾವು ಸಲ್ಲಿಸಿದ್ದ ರೀವಿಜನ್ ಅರ್ಜಿಯನ್ನು ನಿಪಿ-66 ರ ಪ್ರಕಾರ ವಾಪಸ್ ಪಡೆದುಕೊಂಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೇ ನಂ. 363 ರ ಜಮೀನು ಸಾಯಮ್ಮ ತೀರಿ ಹೋದ ನಂತರ ಶಾಮಮ್ಮ ನಿಗೆ ಬಂದಿದೆ ಎಂದರೆ ಸರಿ. ಸರ್ವೆ ನಂ. 363 ಮುಂಚೆ ನನ್ನ ಮುತ್ಯಾ ಹುಸೇನಪ್ಪ ನ ಹೆಸರಿನಲಿತ್ತು ಅವರಿಂದ ನಮಗೆ ಬಂದಿದೆ. ಸರ್ವೇ ನಂ.ನ 363 ರ ಜಮೀನು ಶಾಮಮ್ಮ ನ ಹೆಸರಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತದಾನಂತರ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಸರ್ವೇ ನಂ.363 ರ ಜಮೀನು ನನ್ನ ಮುತ್ಯಾ ಹುಸೇನ್ಪನಿಂದ ಬಂದ ಜಮೀನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ವಾದ ಪತ್ರದ ಜೋತೆ ಹಾಜರುಪಡಿಸಿರುವ ವಂಶವಳಿಯನ್ನು ನೋಡಿದ್ದೇನೆ. ಸಾಕ್ಷಿಗೆ ವಾದ ಪತ್ರ ತೋರಿಸಲಾಗಿ ವಂಶವೃಕ್ಷ  ಸರಿಯಾಗಿ ಎಂದರೆ ಅಥವ ಇಲ್ಲ ಎಂದು ಕೇಳಲಾಗಿ ಸರಿ ಇದೆ ಎಂದು ಹೇಳುತ್ತಾರೆ. ನಮಗೂ ದಾವಾ ಜಮೀನುಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು 1983 ರಲ್ಲಿ ಶಾಮಮ್ಮ ನ ಹೆಸರಿಗೆ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವೆರದು ತದಾನಂತರ ರಾಜೀ ಪ್ರಕಾರ ನಮಗೆ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ರಾಜಿ ಡೀಕ್ರಿಯಲ್ಲಿ ಸರ್ವೇ ನಂ. 363 ರಲ್ಲಿ  ಇಲ್ಲ ಎಂದರೆ  ಸರಿ. ಸಾಕ್ಷಿ ಮುಂದುವರೆದು ಎಲ್ಲಾ ಆಸ್ತಿ ಬರೆದು ಕೊಟ್ಟಿದ್ದು ಆದರೆ ಸರ್ವೇ ನಂ. 363 ನ್ನು ವಕೀಲರು ಉಲ್ಲೇಖ ಮಾಡಿಲ್ಲ ಎಂದು ಹೇಳುತ್ತಾರೆ.

ಶಾಮಮ್ಮ ಬದುಕಿರುವರಗೆ ದಾವಾ ಸ್ವತ್ತುಗಳಲ್ಲಿ ಕಬ್ಜಾದಲ್ಲಿದ್ದರು, ಶಾಮಮ್ಮ ತೀರಿ ಹೋದ ನಂತರ ಅವರ ಮಕ್ಕಳು ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವೆರದು ನಾವು ಕಬ್ಜಾದಲ್ಲಿ ಇದ್ದಾರೆ ಎಂದು ಹೇಳುತ್ತಾರೆ. ನಮ್ಮ ಹಿರಿಯರಾದ ರಾಮಪ್ಪ ತಂದೆ ಸಾಯಣ್ಣ, ಪೆದ್ದ ಯಲ್ಲಪ್ಪ ತಂದೆ ಭೀಮಪ್ಪ, ಚಿನ್ನ ಯುಲ್ಲಪ್ಪ  ತಂದೆ ಸಾಯ ಣ್ಣ,  ನರಸಪ್ಪ ತಂದೆ ಹುಸೇನಪ್ಪ , ಮೊಗಲಪ್ಪ ರವರ ನಡುವೆ ಭಾಗ ಆಗಿತ್ತು. ನಾನು ಹುಟ್ಟುವ ಮುಂಚೆ ಭಾಗ ಆಗಿತ್ತು . ನನಗೆ ಈಗ 39 ವರ್ಷ ವಯಸ್ಸು . ಸುಮಾರು 40 ವರ್ಷಗಳ ಹಿಂದೆ ಭಾಗ ಆಗಿತ್ತು. ಮೇಲಿನ 5 ಜನರ ಮಕ್ಕಳು ತದಾನಂತರ ಭಾಗ ಮಾಡಿಕೊಂಡಿದ್ದಾರೆ. ಅವರು ಭಾಗ ಮಾಡಿಕೊಂಡು ಸುಮಾರು 30 ವರ್ಷ ಆಗಿದೇ. ದಾವಾ ಆಸ್ತಿಗಳನ್ನು ಭಾಗದ ಆಧಾರದ ಮೇಲೆ ಮುಟೇಷನ ಮಾಡಿಕೋಡುವಂತೆ ನನ್ನ ತಂದೆ ಅರ್ಜಿ ಕೊಟ್ಟಿರಲ್ಲಲ್ಲ ನನ್ನ ತಾಯಿ ಅರ್ಜಿ ಕೊಟ್ಟಿದ್ದರು . ವಿಭಾಗದಂತೆ ಮುಟೇಷನ್ ಆಗಿಲ್ಲ. ಸಾಕ್ಷಿ ಮುಂದುವೆರದು ನ್ಯಾಯಾಲಯದಲ್ಲಿ ದಾವೆ ವಿಚಾರಣೆಗೆ ಬಾಕಿ ಇದ್ದ ಕಾರಣ ಮುಟೇಷನ ಆಗಿಲ್ಲ ಎಂದು ಹೇಳುತ್ತಾರೆ,. ಸದರಿ ದಾವೆ ಇದೆ ದಾವೆ ಆಗಿದೆ. ದಾವಾ ಆಸ್ತಿಗಳು ನಮಗೆ

OS No. 19/2015

DW-2

ಸಂಬಂಧಪಟ್ಟಿದ್ದು ವಾದಿಯರಿಗೆ ಸಂಬಂಧ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ತಹಶಿಲ್ದಾರ, ಎ.ಸಿ ಕಚೇರಿ ಮತ್ತು ಜಿಲ್ಲಾ ಅಧಿಕಾರಿಗಳ ಕಚೇರಿಯಲ್ಲಿ ನಮ್ಮ ಪರವಾಗಿ ಆದೇಶ ಆಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಲಾಕ್ ಡೌನ್ ನಲ್ಲಿ ನಾವು ಹಾಜರಾಗದ ಕಾರಣ ನಮ್ಮ ವಿರುದ್ಧ ತೀರ್ಮಾನ ಆಗಿದೆ ಎಂದು ಹೇಳುತ್ತಾರೆ. ಶಾಮಮ್ಮ ಮತ್ತು ಅವರ ಮಕ್ಕಳು ಚಂದ್ರಕಲ ಗ್ರಾಮದವರು ಎಂದರೆ ಸರಿ. ಅಸಲು ದಾವಾ ನಂ. 3/1985 ಸಲ್ಲಿಸುವ ಮುಂಚೆ ಶಾಮಮ್ಮರವರಿಗೆ ಬೇದರಿಕೆ ಹಾಕಿ ನನ್ನ ತಂದೆ ಮತ್ತು ಇತರರು ಮನೆಯಿಂದ ಒರಗೆ ಹಾಕಿದ್ದರು ಎಂದರೆ ಸರಿಯಲ್ಲ, ಆಗ ನಾವು ದಾವಾ ಸ್ವತ್ತುಗಳ ಸ್ವಾ ದೀನಕ್ಕೆ ತೊಂದರೆ ಕೊಟ್ಟ ಕಾರಣ ಶಾಮಮ್ಮ ಅಸಲು ದಾವಾ ನಂ. 3/1985 ಸಲ್ಲಿಸಿದ್ದರು ಎಂದರೆ ಸರಿಯಲ್ಲ, ಇವತ್ತಿಗೂ ವಾದಿಯರು ದಾವಾ ಸ್ವತ್ತುಗಳಲ್ಲಿ ಉಳುಮೆ ಮಾಡುವಾಗ ತೊಂದರೆಕೋಡುತ್ತೇವೆ ಎಂದರೆ ಸರಿಯಲ್ಲ, ನಾವು ರಾಜಕೀಯ ಮತ್ತು ಪೊಲೀಸ ಪ್ರಭಾವ ಬಳಸಿ ವಾದಿಯರನ್ನು ದಾವಾ ಸ್ವತ್ತಿನ ಸ್ವಾ ದೀನತೆಯಿಂದ ಹೊರ ಹಾಕಲು ಪ್ರಯತ್ನ ಪಟ್ಟಿದ್ದೇವೆ ಎಂದರೆ ಸರಿಯಲ್ಲ,

ನನ್ನ ತಾಯಿ , ನನ್ನ ಮುತ್ಯಾಗಳು, ದೊಡ್ಡಮ್ಮ , ಶಾಮಮ್ಮ ನ ಮಕ್ಕಳು ಜೋತೆ ಮಾತುಕತೆ ಮಾಡಿದ್ದರು. ಸುಮಾರು 13 ವರ್ಷಗಳ ಹಿಂದೆ ಮಾತುಕತೆ ಮಾಡಿದ್ದರು. ಶಾಮಮ್ಮ ತೀರಿ ಹೋಗಿ ಎಷ್ಟು ವರ್ಷ ಆಯಿತು ನನಗೆ ಗೊತ್ತಿಲ್ಲ, ಶಾಮಮ್ಮ ಈ ದಾವೆ ಸಲ್ಲಿಸಿದ ನಂತರ ಪ್ರತಿವಾದಿಯರು ಪ್ರತಿ ವಾದ ಪತ್ರ ಸಲ್ಲಿಸಿದ ನಂತರ ತೀರಿ ಹೋಗಿದ್ದಾರೆ ಎಂದರೆ ಸರಿ. ಶೀಲಾರಕೋಟ್ ನಲ್ಲಿ ಮಾತುಕತೆಜ ಆದಾಗ ನಮ್ಮ ಗ್ರಾಮದ ದಾಮೋದರ್ ರೆಡ್ಡಿ, ಭೀಮರೆಡ್ಡಿ , ಪ್ರಕಾಶ, ಬಸವರಾಜ , ಕಿಷ್ಟರೆಡ್ಡಿ ಮತ್ತು ಇತರರು ಇದ್ದರು. ಮೇಲಿನ ಹಿರಿಯರು ವಾದಿಯರ ದಾವ ಸ್ವತ್ತುಗಳ ಸ್ವಾ ದೀನಕ್ಕೆ ತೊಂದರೆ ಕೊಡದಂತೆ ನನ್ನ ತಾಯಿ , ದೊಡ್ಡಮ್ಮ ನನ್ನ ಮುತ್ಯಾಗಳಿಗೆ ಹೇಳಿದರು ಎಂದರೆ ಸರಿಯಸಡಲ್ಲ, ಅವರ ಮಾತನ್ನು ಕೇಳದೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**

OS No. 19/2015

DW-2